ಮಾತುಗಳು ಇಂದು ಆಕೆಯ ಅಧಿಕೃತ ಆತ್ಮಕಥನದಂತೆಯೇ ಪರಿಗಣಿತವಾಗುತ್ತಿದೆ. ಇದು ಟಾಲ್‌ಸ್ಟಾಯ್‌ನನ್ನು ಅಲ್ಲಗಳೆಯುವ, ಅವಮಾನಿಸುವ ಪ್ರಯತ್ನವಲ್ಲ. ಈ ಕಾರಣಕ್ಕಾಗಿ ಆತನ ಬರವಣಿಗೆಯ, ಧೀಮಂತ ವ್ಯಕ್ತಿತ್ವದ ಅವಹೇಳನೆಯಲ್ಲ. ಬದಲಿಗೆ, ಗಂಡಿನ ಸವಲತ್ತುಗಳನ್ನು, ಅದನ್ನು ದಕ್ಕಿಸಿಕೊಳ್ಳಲು ಆತನಿಗಿರುವ ಮುಕ್ತ ಅವಕಾಶವನ್ನು ಒಂದು ನೆಲೆಯಲ್ಲಿ ಹೇಳುತ್ತಿದ್ದರೆ, ಅಂಥ ಯಾವುದೇ ಸವಲತ್ತು, ಹಕ್ಕು ಮತ್ತು ಅವಕಾಶಗಳೇ ಇಲ್ಲದ ಒಬ್ಬ ಹೆಣ್ಣಿನ ಬದುಕನ್ನಲ್ಲ, ಕೋಟ್ಯಂತರ ಹೆಣ್ಣಿನ 'ಅವಸ್ಥೆ'ಯನ್ನು ಸೋಫಿಯಾ ಮಾತುಗಳು ಪ್ರತಿನಿಧಿಸುತ್ತಿವೆ. ಗಂಡಿನ ಆತ್ಮಕಥನಗಳು ಅವರ ಅನನ್ಯತೆಯನ್ನು ಎತ್ತಿಹಿಡಿದರೆ, ಹೆಣ್ಣಿನ ಆತ್ಮಕಥನಗಳಲ್ಲಿ ಸಾಧಾರಣೀಕರಣದ ಅಂಶಗಳು ದಟ್ಟವಾಗುತ್ತಾ ಹೋಗುತ್ತವೆ. ಈ ಸಾಂದ್ರತೆಯೇ ಅವರ ಆತ್ಮಕಥನಗಳಿಗೆ ಹಕ್ಕೊತ್ತಾಯದ ಶಕ್ತಿಯನ್ನು, ಪ್ರತಿಭಟನೆಯ ಸ್ವರೂಪವನ್ನು, ವಿಷಾದದ ನಿಟ್ಟುಸಿರಿನ ತೀವ್ರತೆಯನ್ನು ತರುತ್ತದೆ. ಒಂದೇ ಬದುಕು ಗಂಡು ಮತ್ತು ಹೆಣ್ಣಿನ ವಿಷಯದಲ್ಲಿ ಎರಡಾಗಿ ಒಡೆಯುವುದನ್ನು, ಗಂಡಿಗೆ ಅದು ಹಕ್ಕಾಗಿ, ಹೆಣ್ಣಿಗೆ ಅದು ವಂಚನೆಯಾಗಿ ಮಾರ್ಪಡುವುದನ್ನು ಆಶ್ಚರ್ಯದಿಂದ ಹೆಣ್ಣು ನಿಟ್ಟಿಸುತ್ತಿರುವಂತೆಯೂ 'ಅವಳ ಆತ್ಮಕಥನಗಳು' ನಮಗೆ ಭಾಸವಾಗುತ್ತವೆ.



ಇನ್ನೂ ನಾಟಕೀಯವಾಗಿ ಹೇಳುವುದಾದರೆ, ಆತ್ಮವೇ ಇಲ್ಲವೆಂದು ಆರೋಪಿಸಲಾಗುತ್ತಿದ್ದ ಮಹಿಳೆಯರು ಆತ್ಮಕಥನಗಳನ್ನು ಬರೆಯುವುದು ಅವಳಿಗಿರುವ ಆತ್ಮವನ್ನು ಮಾತ್ರವಲ್ಲ, ಆ ಆತ್ಮಕಥನಗಳು ವ್ಯವಸ್ಥೆಯ ಆತ್ಮಸಾಕ್ಷಿಯನ್ನೇ ಎಚ್ಚರಿಸುವ ಬರವಣಿಗೆಗಳೂ ಆಗುತ್ತಿವೆ. ಹೆಣ್ಣಿನ ಗೋಳಿನ ಕಥನಗಳೆಂದು, ಗಂಡಿನ ಕಾರುಣ್ಯದಿಂದ ಪಡೆದ ಬದುಕಿನ ಕಥನಗಳೆಂದು, ಏನಿದ್ದೂ ಗೂಟಕ್ಕೆ ಕಟ್ಟಿದ ಪ್ರಾಣಿಯ ನಿರೂಪಣೆಗಳೆಂದು ತಿಳಿಯಲಾಗುತ್ತಿದ್ದ ಹೆಣ್ಣಿನ ಕಥಾನಕಗಳು ಈಗ ಗಮನಿಸಲೇಬೇಕಾದ ಬೆಳವಣಿಗೆಗಳಾಗಿವೆ.

ಆತ್ಮಕಥಾನಕಗಳ ಬಗೆಗೇ ಅನೇಕ ಪ್ರಶ್ನೆಗಳಿವೆ. ಅವು ನಿಜವಾದ ಅರ್ಥದಲ್ಲಿ ಆತ್ಮಕಥೆಗಳಾಗಲು ಸಾಧ್ಯವಿಲ್ಲವಾದ್ದರಿಂದ, ವ್ಯಕ್ತಿ ತನ್ನ ಬದುಕನ್ನು ತಾನೇ ಸಂಪಾದಕನಾಗಿ/ಳಾಗಿ ಬೇಕಾದ್ದನ್ನು ಇಟ್ಟುಕೊಂಡು ಬೇಡವಾದದ್ದನ್ನು ಬಿಟ್ಟು ಬಿಡುವ, ಅಥವಾ ತನ್ನ ಮೂಗಿನ ನೇರಕ್ಕೆ ಅದನ್ನು ಮಂಡಿಸುವ ಬರವಣಿಗೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾದ ಅಗತ್ಯವೇ ಇಲ್ಲ ಎನ್ನುವ ವಾದವೂ ಇದೆ. ಏನು ಮಾಡಿಯೂ ಪಾರದರ್ಶಕವಾದ ಆತ್ಮಕಥನವನ್ನು ಬರೆಯಲು ಸಾಧ್ಯವೇ ಇಲ್ಲ. ಆತ್ಮವಂಚನೆಯ ಬರವಣಿಗೆಯನ್ನು ಯಾಕಾಗಿ ಓದಬೇಕು ಎನ್ನುವ ಮಾತು ಸತ್ಯವೇ ಎನ್ನಿಸಿ ಬಿಡುವ ನೂರಾರು ಆತ್ಮಕಥನಗಳು ನಮ್ಮ ನಡುವೆಯೇ ಇವೆ. ಆದರೆ, ಈ ಯಾವ ಮಾತುಗಳನ್ನೂ ಮಹಿಳೆಯರ ಮಟ್ಟಿಗೆ ಸಾರಾಸಗಟಾಗಿ ಒಪ್ಪಲು ಸಾಧ್ಯವೇ ಇಲ್ಲ ಎನ್ನುವುದೇ ಮಹಿಳಾ ಆತ್ಮಕಥನಗಳ ಮಹತ್ತ್ವವನ್ನು ಹೇಳುತ್ತದೆ. ಇವರಲ್ಲಿ ಆತ್ಮವಂಚನೆ, ವೇಷ, ಸೋಗೆ ಇಲ್ಲವೆಂದಲ್ಲ. ಅವುಗಳಿಗೆ ಬೇರೆಯದೇ ಅರ್ಥ ವ್ಯಾಪ್ತಿ ಇದೆ. ಅವುಗಳಿಗೆ ಇರುವ ಸಾಂಸ್ಕೃತಿಕ, ಸಾಮಾಜಿಕ